https://www.kuvempuonline.com

**Q.P. Code – 10556-B**

**ಐದನೆಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ , ಮೇ/ಜೂನ್ 2017**

*(ಹೊಸಬರಿಗೆ)*

**ಐಚ್ಛಿಕ ಕನ್ನಡ ಪತ್ರಿಕೆ – ೫**

**(SAE 430) ಗದ್ಯ ಕಥನ ಮತ್ತು ಛಂದಸ್ಸು**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

1. **ಒಂದನ್ನು** ಹೊಸಗನ್ನಡದಲ್ಲಿ ಬರೆದು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **1 × 6 = 06**

(೧) ಎಮ್ಮ ಮಾವಂ ಬೈಕಂದಿರಿದು ತಂದ ಕೂಟ್ಗೆ ನೆರೆಮಣ್ಣೆಯನಕ್ಕೆಪ್ಪನಕ್ಕೆ
ಕಟೆಯನಕ್ಕೆಂದಪ್ಪೊಡಮಿಕ್ಕಿಯುಮೆಱೆಸಿಯುಮರಿಯಂ ಕೆಱೆಗೆವೋಗಿ ಮೀವಾಗಳ್
ತಲೆಯಂ ಪೂಸಲೆಣ್ಣೆಯನಪ್ಪೊಡಮೆಱೆಯಿಸಿಯರಿಯಂ ತಾಂ ದಿವ್ಯಮಪ್ಪಾಹಾರಂಗ
ಳಂ ದೆವಸದೆವಸಕ್ಕಂ ಪಲಂಬರ್ ನಂಟರ್ಕಳುಂ ಆಳ್ಗಳುಂ ಬೆರಸುಣ್ಗುಂ.......

(೨) ಅನಿಬರುಂ ತ್ರಸ್ತಾಭಿಭೂತರಾಗಿ ಪಟ್ಟನೆ ಪಾಱೆಯೋಡಿಕೆಟ್ಟೊಳ್ಳಿತ್ತ
ಮ್ಮಂ ಬಿರ್ದ್ದಿ ಧಿಧ್ರಿಸಿದಳೆಂದು ಪಗೆಸಾರಿರ್ದ್ದರಿತ್ತ ಬಿರ್ದ್ದಿಯುಂ ನೆಟ್ಟಂದಿರುಳ್
ಕಳ್ಳರ್ ಬರ್ಪರೆಂದಱೆದು ಕೂರಿತಪ್ಪ ಬಾಳಂ ಪಿಡಿದಿರ್ದ್ದಳನ್ನೆಗ ಮಿರುಳ್ ಕಳ್ಳರ್
ವಂದಾಕೆಯ ಲುಂದಿದ ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಿಲೊಳಾ
ಬಾಳನಡ್ಡಮಿಟ್ಟು ಪಿಡಿದಿರ್ದು ...............

2. **ಎಂಟು** ಪದಗಳಿಗೆ ಅರ್ಥ ಬರೆಯಿರಿ : **8 × $\frac{1}{2}$ = 04**

ಕಸವರ, ಕಪ್ಪಡ, ಓಜ, ಅಟ್ಗೆ, ಮಿಥ್ಯೆ, ಪೊಲ್ಲಮಾನಸ, ವ್ಯಾಧಿ, ಬಧಿರ, ಪಂದೆ, ಖಳ, ಭವನ, ರಜತ.

3. **ಮೂರು** ಪ್ರಶ್ನೆಗಳಿಗೆ ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ : **3 × 3 = 09**

(೧) ನಿಮ್ಮ ಮಾವನಪ್ಪ ಸೂರ್ಯ ಮಿತ್ರನಲ್ಲನ್

(೨) ಕಳ್ಳಂಗೆ ತಕ್ಕ ನಿಗ್ರಹಮಂ ನಿಮಗೆ ಮಾಳ್ಪೆನ್

(೩) ಮನುಷ್ಯ ಜನ್ಮಮಂ ಪಡೆದು ಗುಣಮೆಂಬನರ್ಘ್ಯಮಾಣಿಕಮಂ ಕೊಳ್ಳದೆ ಪೋಗಿ

(೪) ಈತನ ಪ್ರಸಾದದಿಂದಿನಿತು ಸಿರಿಯಾದುದು

(೫) ತಿಂಗಳಿಗೊಂದು ಖಂಡಿಗ ಭತ್ತಮಂ ಹರಿದಾಸಂಗೆ ಕೊಡುತ್ತಿಪ್ಪುದುಂ

4. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **2 × 8 = 16**

(೧) ಸುಧಾಮೆಯ ಕಥೆಯ ಸ್ವಾರಸ್ಯ ಬರೆಯಿರಿ.

(೨) ಜಂಬು ಕುಮಾರ ಮತ್ತು ವಿದ್ಯುಚ್ಚೋರರ ಸಂಭಾಷಣೆಯ ಸ್ವಾರಸ್ಯ ಬರೆಯಿರಿ.

(೩) 'ನಂದಿ ಮಿತ್ರನ' ಕಥೆಯಲ್ಲಿ ಬರುವ ಶೋಷಣೆ ಮತ್ತು ಉಪವಾಸದ ಮಹತ್ವ ಹಾಗೂ ದೃಢ ಚಿತ್ತದ ಪರಿಣಾಮಗಳನ್ನು ವಿವರಿಸಿ.



ಪು.ತಿ.ನೋ.

https://www.kuvempuonline.com
https://www.kuvempuonline.com
https://www.kuvempuonline.com

https://www.kuvempuonline.com

Q.P. Code – 10556-B

5. ಒಂದು ಪ್ರಶ್ನೆಗೆ ಉತ್ತರಿಸಿ : **1 × 5 = 05**

(೧) ವೈನಾಕ ನಿಧಿಯನ್ನು ಗುಟ್ಟಾಗಿಡಲು ಹೆಂಡತಿಯನ್ನು ಪರೀಕ್ಷಿಸಿದುದು

(೨) ವಾಯುಭೂತಿ

(ಛಂದಸ್ಸು)

6. ಮೂರು ಪ್ರಶ್ನೆಗಳಿಗೆ ಉತ್ತರಿಸಿ : **3 × 8 = 24**

(೧) ಛಂದಸ್ಸು ಶಬ್ದದ ನಿಷ್ಪತ್ತಿ ಮತ್ತು ಛಂದಸ್ಸಿನ ಪ್ರಯೋಜನಗಳನ್ನು ಕುರಿತು ಬರೆಯಿರಿ.

(೨) ರಗಳೆ ಶಬ್ದದ ನಿಷ್ಪತ್ತಿ ಮತ್ತು ರಗಳೆ ಪ್ರಭೇದಗಳನ್ನು ಕುರಿತು ಬರೆಯಿರಿ.

(೩) ಗಣ ಎಂದರೇನು? ಗಣಗಳ ಸ್ವರೂಪ ಮತ್ತು ಲಕ್ಷಣಗಳನ್ನು ಬರೆಯಿರಿ.

(೪) ಅಂಶಗಣ ತ್ರಿಪದಿ ಮತ್ತು ಮಾತ್ರಾಗಣ ತ್ರಿಪದಿಯ ಲಕ್ಷಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

7. ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ : **2 × 4 = 08**

(೧) ಕಂದ

(೨) ಮುಡಿ

(೩) ತ್ರಿಪದಿ

8. ಎರಡು ಪದ್ಯಗಳಿಗೆ ಪ್ರಸ್ತಾರ ಹಾಕಿ. ಗಣ ವಿಭಜಿಸಿ. ಛಂದಸ್ಸಿನ ಲಕ್ಷಣ ತಿಳಿಸಿ : **2 × 4 = 08**

(೧) ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೆ ನೀ ಮನವೆ

(೨) ನೆನೆಯದಿರಣ್ಣ ಭಾರತದೊಳಿಂಪೆಱರಾರುಮನೊಂದೆ ಚಿತ್ತದಿಂ

(೩) ಜಾಣೆ ಜಾಣನು ಕೂಡಲದು ತಂತಿಗೂಡಿದ
ವೀಣೆಯ ನುಡಿಸಿದಂತಿಹುದು

https://www.kuvempuonline.com
Whatsapp @ 9300930012
Send your old paper & get 10/-
अपने पुराने पेपर्स भेजे और 10 रुपये पायें,
Paytm or Google Pay से



https://www.kuvempuonline.com